**KARNATAKA SUCCESS NO 1**
Kannada Daily

ಸಂಪಾದಕರು/ಮಾಲೀಕರು
ರಾಧಿಕಾ ಎ.ಆರ್.

Volume: 02 Issue-115
ಬುಧವಾರ 05 ಮಾರ್ಚ್ 2025

Price: 2.00 Rs. Pages - 2

RNI: KARKAN/2023/88508


# ಕರ್ನಾಟಕ ಸಕ್ಸಸ್ ನಂ 1


ಕನ್ನಡ ದಿನಪತ್ರಿಕೆ

ನಮ್ಮ ಸಂಪರ್ಕ: ಇ–ಮೇಲ್: karnatakasuccessno1ar@gmail.com ಮೊಬೈಲ್: 9380988530, 9606988508




ಹಂಪಿ ಉತ್ಸವ ಕಾರ್ಯಕ್ರಮದಲ್ಲಿ ಗ್ರಾಮೀಣ ಕ್ರಿಯಾತ್ಮಕ ರಂಗತಂಡ(ರಿ), ತಿಮ್ಮಲಾಪುರ, ತುಮಕೂರು ತಾ:, ತಂಡವು ಮಹಾನವಮಿ ದಿಬ್ಬ ವೇದಿಕೆಯಲ್ಲಿ ಸುಯೋಧನ ಎಂಬ ಸಾಮಾಜಿಕ ನಾಟಕವನ್ನು ಉತ್ತಮವಾಗಿ ಪ್ರದರ್ಶನ ನೀಡಿತು. ಸದರಿ ವೇದಿಕೆಯ ರಾಯಭಾರಿಗಳು ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ನಾರಾಯಣಪ್ಪ ಕಾರಿಗನೂರು ಹಾಗೂ ಜಿಲ್ಲಾಡಳಿತದ ವತಿಯಿಂದ ತಂಡವನ್ನು ಸನ್ಮಾನಿಸಿ ಗೌರವಿಸಲಾಯಿತು.

## ಪಿಎಲ್‌ಡಿ ಬ್ಯಾಂಕ್ ಆಡಳಿತ ಮಂಡಳಿಗೆ ಆಯ್ಕೆ



ಕುಣಿಗಲ್ : ಕುಣಿಗಲ್ ತಾಲೋಕ್ ಪಿಎಲ್ ಡಿ ಬ್ಯಾಂಕ್ ನ ಆಡಳಿತ ಮಂಡಳಿಗೆ ನಿರ್ದೇಶಕರುಗಳಾಗಿ ಡಿ. ಕೃಷ್ಣಕುಮಾರ್ ನೇತೃತ್ವದಲ್ಲಿ ಆಡಳಿತ ಮಂಡಳಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ತಾಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನ ಆಡಳಿತ ಮಂಡಳಿಗೆ ಸಾಮಾನ್ಯ ಕ್ಷೇತ್ರದಿಂದ ಡಿ. ಕೃಷ್ಣಕುಮಾರ್, ಯಡಿಯೂರು ಹೋಬಳಿ, ಸುರೇಶ್ ಅಮೃತೂರು ಬಿಆರ್ ಶಿವಣ್ಣ, ಕಸಬಾ ರಂಗಯ್ಯ ಎಚ್‌ಜಿ, ಹುತ್ರಿ ನಂಜಪ್ಪ, ಹುತ್ರಿ ಹೋಬಳಿ, ವೆಂಕಪ್ಪ ಕೊತ್ತಗೆರೆ ಹೋಬಳಿ ಬೋರೇಗೌಡ ಹೋಬಳಿ. ರಂಗಸ್ವಾಮಿ ಪರಿಶಿಷ್ಟ ಜಾತಿ, ಮಂಜುನಾಥ್ ಪರಿಶಿಷ್ಟ ಪಂಗಡ ಯಡಿಯೂರು ಹೋಬಳಿ. ಮಾಯಮ್ಮ ಮಹಿಳಾ ಮೀಸಲು, ಅಮೃತೂರು ಹೋಬಳಿ ನಂದಿನಿ ಬಿ ಆರ್, ಮಹಿಳಾ ಮಿಸಲು ಸ್ಥಾನ, ಕೋತ್ತಗೆರೆ ಹೋಬಳಿ, ರವಿ ಹಿಂದುಳಿದವರ್ಗಬಿ,ಹುಲಿಯೂರು ದುರ್ಗ,ಜೋಗಯ್ಯ, ಕೋತ್ತಗೆರೆ ಹಿಂದುಳಿದವರ್ಗಎ ಮೀಸಲು ,ಸಾಲಗಾರರಲ್ಲದ ಸಾಮನ್ಯ ಸ್ಥಾನದಿಂದ ಧನುಷ್ ಗಂಗಟ್ಕ್ ರ್, ಅವಿರೋಧವಾಗಿ ಚುನಾಯಿತರಾಗಿದ್ದಾರೆ. ರಿಟರ್ನಿಂಗ್ ಅಪೀಸರ್ ಆಗಿ ಒಬಳ್ಲೇಶ್ ಕರ್ತವ್ಯ ನಿರ್ವಹಿಸಿದರು.

## ತಿಪಟೂರಿನಲ್ಲಿ ಬರಗೂರು ರಾಮಚಂದ್ರಪ್ಪರಿಗೆ 'ಕಲ್ಪತರು ರತ್ನ' ಪ್ರಶಸ್ತಿ ಪ್ರದಾನ

# ಮನುಷ್ಯನ ಮೃಗೀಯ ಗುಣ ಮುರಿದು ಮೌಲ್ಯ ಸೌಹಾರ್ಧತೆಯ ಗುಣ ಬರಬೇಕು

ತಿಪಟೂರು : ನಗರದ ಕಲ್ಪತರು ತಾಂತ್ರಿಕ ಮಹಾವಿದ್ಯಾಲಯದ ಸಭಾಂಗಣದಲ್ಲಿ ಕಲಾಕೃತಿ ಸಂಸ್ಥೆ, ಕಲ್ಪತರು ವಿದ್ಯಾಸಂಸ್ಥೆ, ಮತ್ತು ಸತ್ಯಕುಮಾರ್ ರಿಲೀಫ್ ಫೌಂಡೇಷನ್ ಇವರ ಸಂಯುಕ್ತಾಶ್ರಯದಲ್ಲಿ ಕಲಾಕೃತಿಯ 28ನೇ ವರ್ಷದ ವಾರ್ಷಿಕೋತ್ಸವ, ಅನ್ನಪೂರ್ಣ ಸಂಚಾರಿ ನಿತ್ಯ ಅನ್ನ ದಾಸೋಹ ಕಾರ್ಯಕ್ರಮದ ಪ್ರಥಮ ವಾರ್ಷಿಕೋತ್ಸವ ಸಮಾರಂಭ ಹಾಗೂ ಸಾಹಿತಿ ನಾಡೋಜ ಬರಗೂರು ರಾಮಚಂದ್ರಪ್ಪ "ಕಲ್ಪತರು ರತ್ನ" ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ನಡೆಯಿತು.



ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಬರಗೂರು ರಾಮಚಂದ್ರಪ್ಪ ವೈಯುಕ್ತಿಕ ಆರೋಗ್ಯದ ಸಮಸ್ಯೆಗಿಂತ ಸಮಾಜದ ಆರೋಗ್ಯ ಮುಖ್ಯವಾಗಿದೆ. ಶಿಕ್ಷಕರಿಗೆ ಬಹು ಮುಖ್ಯವಾಗಿ ವಿದ್ಯಾರ್ಥಿಗಳ ಜೊತೆ ಜಾತಿ ಧರ್ಮವೆಂಬುದನ್ನು ನೋಡಬಾರದು ಎಲ್ಲರನ್ನು ಒಂದೆ ಎಂದು ಕಾಣಬೇಕು. ಅಕ್ಷರಗಳು ಅಹಂಕಾರವಾಗದೆ ಅಂತಕರಣವಾದಾಗ ಮಾತ್ರ ವಿದ್ಯೆಗೆ ಬೆಲೆ ಹೆಚ್ಚುತ್ತದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇಂದು ಒಂದು ಶೇಷ್ಠ, ಮತ್ತೊಂದು ಕನಿಷ್ಟ, ನಾಯಕ, ಖಳನಾಯಕ ಎಂಬುದು ಬರಬಾರದು ಕೋಗಿಲೆಗೆ ಕಾಗೆ ಹೋಲಿಸಿ ಕಾಗೆಯನ್ನು ಕನಿಷ್ಟವೆಂದು ಭಾವಿಸಬಾರದು, ಕೋಗಿಲೆಯು ತನ್ನ ಸಂತತಿಯನ್ನು ಹೆಚ್ಚಿಸಲು ಕಾಗೆ ಗೂಡನ್ನು ಅವಲಂಬಿಸುತ್ತದೆ ಆದರೆ ಕಾಗೆಯು ಒಂದು ತುತ್ತು ಅನ್ನ ಕಂಡರೆ ಇಡೀ ಸಮುದಾಯವನ್ನು ಕರೆದು ಹಂಚಿ ತಿನ್ನುವ ಗುಣವನ್ನು ಹೊಂದಿದೆ. ವ್ಯಕ್ತಿಯು ಸಹ ಈ ರೀತಿ ರೂಢಿಸಿಕೊಳ್ಳಬೇಕು ಆದ್ದರಿಂದ ಕಾಗೆಯ ಕಾರುಣ್ಯವನ್ನು ನಾವು ಕಾಣಬೇಕು ಎಂದರು.

ಮನುಷ್ಯ ಮನುಷ್ಯನನ್ನು ಪ್ರೀತಿಸುವ, ಮಾತನಾಡುವ, ಸೌಹಾರ್ತೆಯಿಂದ, ಮೇಲು–ಕೀಳು ಎಂಬ ಭಾವವಿಲ್ಲದೆ ಬದುಕುವುದನ್ನು ಕಲಿಯಬೇಕು. ಇತ್ತೀಚೀನ ದಿನಗಳಲ್ಲಿ ಮನುಷ್ಯನಲ್ಲಿ ಮೃಗೀಯ ಅಂಶ ಹೆಚ್ಚಾಗಿದ್ದು, ಆಕ್ರಮಣ, ಕುತಂತ್ರ, ವಂಚನೆ, ಮೋಸ, ಮೋಹದ ಪ್ರಮಾಣ ಅಪಾರವಾಗಿದ್ದು, ದ್ವೇಷ, ವಿರೋಧ, ಆಘಾತಕಾರಿ, ಅಪಾಯಕಾರಿ ಅಮಾನೀಯ, ಸಮಾಜದಲ್ಲಿ ಕಲುಷಿತ ವಾತಾವರಣ, ಸೃಷ್ಟಿಯಾಗುತ್ತಿದೆ ಎಂದರು.

ಕಲಾಕೃತಿ ಸಂಸ್ಥೆಯ ಅಧ್ಯಕ್ಷ ಡಾ.ಜಿ.ಎಸ್.ಶ್ರೀಧರ್ ಮಾತನಾಡಿ ಹಸಿದು ಬಂದವರಿಗೆ ಪ್ರಸಾದ ರೂಪದಲ್ಲಿ ಅನ್ನಪೂರ್ಣ ಸಂಸ್ಥೆಯ ಮೂಲಕ ಆಹಾರ ನೀಡಲಾಗುತ್ತಿದ್ದು, ನಮ್ಮ ಸಂಸ್ಥೆಯ ಮೂಲಕ ಜನಜಾಗೃತಿ ಹಾಗೂ ಸಮಾಜಮುಖಿ ಕಾರ್ಯಗಳನ್ನು ಮಾಡಲಾಗವುದು ಎಂದರು.

ಕಾರ್ಯಕ್ರಮದಲ್ಲಿ ನಗರಸಭಾ ಅಧ್ಯಕ್ಷೆ ಯಮುನಾ ಧರಣೇಶ್, ಕಲ್ಪತರು ವಿದ್ಯಾ ಸಂಸ್ಥೆಯ ಪದಾಧಿಕಾರಿಗಳಾದ ಬಾಗೇಪಲ್ಲಿ ನಟರಾಜು, ಸಂಗಮೇಶ್, ಶಿವಪ್ರಸಾದ್. ಉಮಾಶಂಕರ್, ಐಎಫ್‌ಡಬ್ಲ್ಯೂಜೆ. ಪ್ರಧಾನ ಕಾರ್ಯದರ್ಶಿ ಮಧನಗೌಡ, ಕಲಾಕೃತಿ ಸಂಸ್ಥೆಯ ಪದಾಧಿಕಾರಿಗಳಾದ ಡಿ.ವಿ.ಎಸ್.ಗುಪ್ತ, ಸಾಹಿತಿ ನಾಗರಾಜಯ್ಯ, ಜ್ಯೋತಿ ಗಣೇಶ್, ಡಾ.ವಿವೇಜನ್, ಎ.ಟಿ. ಪ್ರಸಾದ್, ನಿರಂಜನ ಮೂರ್ತಿ, ತಿಪಟೂರುಕೃಷ್ಣ, ಶೋಭಾ ಜಯದೇವ್, ಪ್ರಭಾ ವಿಶ್ವನಾಥ್, ಮಂಜುಳಾ ತಿಮ್ಮೇಗೌಡ ವೊಡಾಫೋನ್ ಚಂದ್ರು, ತರಕಾರಿ ಗಂಗಾಧರ್, ತೋಂಟಿ. ಕಿರಣ್, ಕೆ.ಎಮ್.ರಾಜಣ್ಣ, ಕಸಾಪ ಸದಸ್ಯರು, ಮತ್ತಿತರರು ಭಾಗವಹಿಸಿದ್ದರು.

## ಶುಲ್ಕ ಮರುಪಾವತಿ ಸೌಲಭ್ಯ: ಅರ್ಜಿ ಆಹ್ವಾನ

ತುಮಕೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಸ್ನಾತಕೋತ್ತರ ಪದವಿ, ವೃತ್ತಿಪರ ಪದವಿ ಮತ್ತು ವೃತ್ತಿಪರ ಸ್ನಾತಕೋತ್ತರ ಪದವಿ ಸೇರಿದಂತೆ 2023–24ನೇ ಸಾಲಿನ ಮೆಟ್ರಿಕ್ ನಂತರದ ಕೆಲವು ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಸೌಲಭ್ಯ ಕಲ್ಪಿಸಲು ಅರ್ಹರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಆಸಕ್ತ ವಿದ್ಯಾರ್ಥಿಗಳು ಆನ್‌ಲೈನ್ https://ssp.postmatric.karnataka.gov.in ಮೂಲಕ ಮಾರ್ಚ್ 15ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://bcwd.karnataka.gov.in ಅಥವಾ ಸಹಾಯವಾಣಿ ಸಂಖ್ಯೆ: 8050770005, ದೂ.ವಾ.ಸಂ.1902ನ್ನು ಸಂಪರ್ಕಿಸಬಹುದು.

## ತುಮಕೂರು ಮಹಾನಗರಪಾಲಿಕೆ ಗುತ್ತಿಗೆ ನೌಕರರ 2ನೇ ದಿನದ ಮುಷ್ಕರದಲ್ಲಿ ಶಾಸಕ ಜಿ.ಬಿ.ಜ್ಯೋತಿಗಣೇಶ್

# 'ನಾಗರೀಕರಿಗೆ ತೊಂದರೆಯಾಗದಿರಲಿ, ನಿಮ್ಮ ಹೋರಾಟಕ್ಕೆ ಜಯವಾಗಲಿ'

ತುಮಕೂರು: ತುಮಕೂರು ಮಹಾನಗರಪಾಲಿಕೆಯಲ್ಲಿ ಕಳೆದ 20 ರಿಂದ 25 ವರ್ಷಗಳ ಕಾಲ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ವಾಟರ್ ಆಪರೇಟರ್‌ಗಳಿಗೆ ಗುತ್ತಿಗೆ ಪದ್ಧತಿ ರದ್ದು ಮಾಡಿ ನೇರಪಾವತಿ, ಖಾಲಿ ಹುದ್ದೆ ಭರ್ತಿಗೆ ಒತ್ತಾಯಿಸಿ ಮಹಾನಗರಪಾಲಿಕೆಯ ನೀರು ಸರಬರಾಜು ನೌಕರರು ಪಾಲಿಕೆ ಆವರಣದಲ್ಲಿ ಆರಂಭಿಸಿರುವ ಅನಿರ್ದಿಷ್ಟಾವಧಿ ಧರಣಿ ಮಂಗಳವಾರ ಎರಡನೇ ದಿನದಲ್ಲಿ ಮುಂದುವರೆಯಿತು. ಸೇವೆ ಸ್ಥಗಿತಗೊಳಿಸಿರುವ ನೌಕರರ ಪ್ರತಿಭಟನೆ ಹಿನ್ನೆಲೆಯಲ್ಲಿ ನಗರದಲ್ಲಿ ಎರಡು ದಿನಗಳಿಂದ ನೀರು ವಿತರಣೆಯಲ್ಲಿ ವ್ಯತ್ಯಯವಾಗಿದೆ.



ಶಾಸಕ ಜಿ.ಬಿ.ಜ್ಯೋತಿಗಣೇಶ್ ಮಂಗಳವಾರ ಬೆಳಿಗ್ಗೆ ಮುಷ್ಕರ ನಿರತ ನೀರು ಸರಬರಾಜು ನೌಕರರನ್ನು ಭೇಟಿ ಮಾಡಿ, ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿ, ಮನವಿ ಪತ್ರ ಸ್ವೀಕರಿಸಿದರು. ನೌಕರರ ಬೇಡಿಕೆ ಈಡೇರಿಸುವ ಕುರಿತು ಸಂಬಂಧಿಸಿದ ಸಚಿವರೊಂದಿಗೆ ಚರ್ಚಿಸುವುದಲ್ಲದೇ ಸದನದಲ್ಲಿಯೂ ನಿಮ್ಮ ಪರ ಧ್ವನಿ ಎತ್ತುವುದಾಗಿ ಭರವಸೆ ನೀಡಿದರು. ನೌಕರರ ಹೋರಾಟ ಮುಂದುವರೆದರೆ, ಬೇಸಿಗೆ ಕಾಲವಾದ್ದರಿಂದ ನಗರದಲ್ಲಿ ನೀರಿಗೆ ಹಾಹಾಕಾರ ಪರಿಸ್ಥಿತಿ ಎದುರಾಗುತ್ತದೆ. ನಗರದ ವಾರ್ಡ್‌ಗಳಲ್ಲಿ ಯಾವ ಯಾವ ಸ್ಥಳದಲ್ಲಿ ನೀರಿನ ವಾಲ್ ಇರುವುದು ತಮಗೆ ಮಾತ್ರ ತಿಳಿದಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ತಾವೆಲ್ಲ ಸಹಕರಿಸಬೇಕೆಂದು ಮನವಿ ಮಾಡಿದರು ಹಾಗೂ ರಾಜ್ಯ ಸರ್ಕಾರ ಕೂಡಲೇ ಈ ನೌಕರರ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಬೇಕು ಎಂದು ಮನವಿ ಮಾಡಿದರು.

ಮಹಾನಗರ ಪಾಲಿಕೆಯಲ್ಲಿ ನೇರ ಪಾವತಿಗೆ ಗುತ್ತಿಗೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು, ದಿನಗೂಲಿ ಲೋಡರ್ಸ್, ಕಂಪ್ಯೂಟರ್ ಆಪರೇಟರ್‌ಗಳು, ಕಸದ ವಾಹನ ಚಾಲಕರು, ಸಹಾಯಕರು, ಕ್ಲೀನರ್‌ಗಳು, ಒಳಚರಂಡಿ ಸ್ವಚ್ಛತಾ, ಪಾರ್ಕ್, ಸ್ಮಶಾನ, ಘನ ತ್ಯಾಜ್ಯ ವಿಲೇವಾರಿ ಘಟಕ, ಶೌಚಾಲಯಗಳಲ್ಲಿ ಕೆಲಸ ಮಾಡುವ ನೌಕರರು, ಯುಜಿಡಿ ಸಂಸ್ಕರಣಾ ಘಟಕಗಳ ಕಾರ್ಮಿಕರನ್ನು ನೀರು ಸರಬರಾಜು ನೌಕರರ, ನಡುವೆ ತಾರತಮ್ಯ ಮಾಡದೆ ಒಂದೇ ಬಾರಿಗೆ ಖಾಯಂಗೊಳಿಸುವಂತೆ ನೌಕರರು ಸರ್ಕಾರದ ಎದುರು ಬೇಡಿಕೆ ಇಟ್ಟಿದ್ದಾರೆ. ಈ ವಿಚಾರವಾಗಿ ನಾನು ಸದನದಲ್ಲಿ ಚರ್ಚೆ ಮಾಡಿ, ಬೇಡಿಕೆ ಈಡೇರಿಕೆಗೆ ಒತ್ತಾಯಿಸುವುದಾಗಿ ಶಾಸಕ ಜಿ.ಬಿ.ಜ್ಯೋತಿಗಣೇಶ್ ಹೇಳಿದರು. ಜಿಲ್ಲಾ ನೀರು ಸರಬರಾಜು ನೌಕರರ ಸಂಘದ ಅಧ್ಯಕ್ಷ ಕೆ.ಕುಮಾರ್ ಮಾತನಾಡಿ, ಸರ್ಕಾರ ನಮ್ಮ ಬೇಡಿಕೆ ಈಡೇರಿಸಲು ತಾವು ರಾಜ್ಯ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಮನವಿ ಮಾಡಿದರು.

ಪೌರಕಾರ್ಮಿಕರ ಮಾದರಿಯಲ್ಲಿ ನೀರು ಸರಬರಾಜುದಾರರನ್ನು ವಿಶೇಷ ನೇರ ನೇಮಕಾತಿ ಮಾಡಬೇಕು, ಪಾಲಿಕೆಯಲ್ಲಿ ಖಾಲಿ ಇರುವ ಎಲ್ಲಾ 210 ಹುದ್ದೆಗಳಿಗೆ ಹಾಲಿ ಕೆಲಸ ನಿರ್ವಹಿಸುತ್ತಿರುವ ನೌಕರರನ್ನೇ ನೇಮಕ ಮಾಡಬೇಕು. ಈ ಬಗ್ಗೆ ಸರ್ಕಾರ ಈ ಸಾಲಿನ ಬಜೆಟ್‌ನಲ್ಲಿ ಸರ್ಕಾರ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಗುತ್ತಿಗೆ ಪದ್ಧತಿ ರದ್ದು ಮಾಡುವಂತೆ ರಾಜ್ಯಪಾಲರ ಆದೇಶವಿದ್ದರೂ ಸರ್ಕಾರ ಈವರೆಗೆಗೂ ಆದೇಶ ಪಾಲನೆ ಮಾಡಿಲ್ಲ. ನೀರು ಸರಬರಾಜುದಾರರಿಗೆ ಕೆಲಸಕ್ಕೆ ತಕ್ಕ ವೇತನ ನೀಡಬೇಕು. ವಾಲ್‌ಮ್ಯಾನ್ ನೌಕರರಿಗೆ ಗೃಹ ಭಾಗ್ಯ ನೀಡಬೇಕು. ಉಚ್ಚ ನ್ಯಾಯಾಲಯದ ಆದೇಶದಂತೆ ತುರ್ತಾಗಿ ನೇಮಕಾತಿ ಖಾಯಂ ಮಾಡಬೇಕು ಎಂದು ಮನವಿ ಮಾಡಿದರು.

# ಈ ಬಾರಿ ಬಜೆಟ್‌ನಲ್ಲಿ ಹಾಲಿನ ಡೇರಿಯ ರೀತಿ ನೀರಾ ಡೇರಿ ಆರಂಭಿಸಿ: ರೈತ ಸಂಘದ ರಾಜ್ಯಾದ್ಯಕ್ಷ ಹೊಸಹಳ್ಳಿ ಚಂದ್ರಣ್ಣ

ಹುಳಿಯಾರು: ತೆಂಗು ಬೆಳೆಗಾರರ ಬದುಕು ಹಸನಾಗಬೇಕಾದರೆ ಹಾಲಿನ ಡೇರಿಯ ರೀತಿ ನೀರಾ ಡೇರಿ ಆರಂಭಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರಸಕ್ತ ಸಾಲಿನಲ್ಲಿ ಬಜೆಟ್‌ನಲ್ಲಿ ನೀರಾ ಉತ್ಪನ್ನಗಳ ಮೌಲ್ಯವರ್ದನೆಗೆ ಹಣ ಮೀಸಲಿಡುವಂತೆ ಹೊಸಹಳ್ಳಿ ಚಂದ್ರಣ್ಣ ಬಣದ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಹೊಸಹಳ್ಳಿ ಚಂದ್ರಣ್ಣ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.




ಹುಳಿಯಾರಿನಲ್ಲಿ ಈ ಸಂಬಂಧ ಉಪತಹಸೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ ಅವರು ಮಾತನಾಡಿ ಒಂದೆಡೆ ಬರದ ಹೊಡೆತ ಮತ್ತೊಂದೆರೆ ಧರದ ಕುಸಿತದಿಂದ ತೆಂಗನ್ನೇ ನಂಬಿ ಬದುಕುತ್ತಿರುವ ಲಕ್ಷಾಂತರ ಮಂದಿ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ತತ್ತರಿಸಿದ್ದಾರೆ. ಇಂತಹ ಸಂಕಷ್ಟದ ದಿನಗಳಲ್ಲಿ ನೀರಾ ಮಾತ್ರ ತೆಂಗು ಬೆಳೆಗಾರರಿಗೆ ಆರ್ಥಿಕವಾಗಿ ಚೈತನ್ಯ ನೀಡಲು ಸಾಧ್ಯವಾಗಿದೆ. ಹಾಗಾಗಿ ಹಾಲಿನ ಡೇರಿಯ ರೀತಿ ನೀರಾ ಡೇರಿ ಆರಂಭಿಸುವ ಅಗತ್ಯವಿದೆ ಎಂದಿದ್ದಾರೆ.

ನೀರಾ ಒಂದು ಆರೋಗ್ಯಕರ ಹಾಗೂ ನೈಸರ್ಗಿಕ ಪಾನೀಯ. ಅದರಲ್ಲಿ ಅನೇಕ ಬಗೆಯ ಪೌಷ್ಠಿಕಾಂಶಗಳಿವೆ. ಹಾಗಾಗಿ ನೀರಾ ಇಳಿಸಲು ಎಲ್ಲಾ ರೈತರಿಗೂ ಅನುಮತಿ ನೀಡಬೇಕು. ಸರ್ಕಾರದಿಂದಲೇ ನೀರಾ ಇಳಿಸುವ ತರಬೇತಿಯನ್ನು ಉಚಿತವಾಗಿ ಕೊಡಬೇಕು. ನಿತ್ಯ ಮುಂಜಾನೆ ಹಾಲು ಸಂಗ್ರಹಿಸುವಂತೆ ರೈತರಿಂದ ನೀರಾ ಸಂಗ್ರಹಿಸಿ ಕೋಲ್ಡ್ ಸ್ಟೋರೆಜ್‌ನಲ್ಲಿಟ್ಟು ಪಟ್ಟಣದಲ್ಲಿ ಮಾರಬಹುದು. ಮಾರಾಟವಾಗದೆ ಉಳಿದ ನೀರಾದಿಂದ ಬೆಲ್ಲ, ಮಿಠಾಯಿ ಸೇರಿದಂತೆ ಅನೇಕ ಮೌಲ್ಯವರ್ದಿತ ಆಹರೋತ್ಪನ್ನಗಳನ್ನು ಮಾಡಿ ಮಾರಬಹುದು. ಇದರಿಂದ ತೆಂಗು ಬೆಳೆಗಾರದ ಆರ್ಥಿಕ ಸಮಸ್ಯೆಗೆ ಶಾಶ್ವತ ಪರಿಹಾರ ಕೊಟ್ಟಂತ್ತಾಗುತ್ತದೆ ಎಂದು ವಿವರಿಸಿದ್ದಾರೆ.

ರೈತ ಸಂಘದ ತಾಲೂಕು ಕಾರ್ಯಾಧ್ಯಕ್ಷ ಕರಿಯಪ್ಪ, ಹುಳಿಯಾರು ಹೋಬಳಿ ಅಧ್ಯಕ್ಷ ಪುಟ್ಟಯ್ಯ, ಸದಸ್ಯರುಗಳಾದ ನಿಂಗಪ್ಪ, ಕೃಷ್ಣಮೂರ್ತಿ, ಬಸವರಾಜು, ಜಯಣ್ಣ, ಸಂತೋಷ್, ರೇವಣ್ಣ, ಸಿದ್ಧಾಬೋವಿ, ಶ್ರೀನಿವಾಸ್, ಮಂಜುನಾಥ್, ಲಕ್ಕಮ್ಮ, ಚಂದ್ರಶೇಖರ್, ಪುಷ್ಪಬಾಯಿ, ಮೆಕಾನಿಕ್ ಜಗದೀಶ್, ಕುಮಾರಸ್ವಾಮಿ, ಶಿವಣ್ಣ, ದೇವುಬಾಯಿ, ಮಂಜಪ್ಪ, ಆಶಾ, ವಾಣಿಶ್ರೀ, ಈರಣ್ಣ ಮತ್ತಿತರರು ಇದ್ದರು.

## "ಉಚಿತ ಟೈಲರಿಂಗ್ ತರಬೇತಿಗೆ ಆಹ್ವಾನ"

ತುಮಕೂರು: ಕೇಂದ್ರ ಸರ್ಕಾರದ ಜವಳಿ ಮಂತ್ರಾಲಯ ಮತ್ತು ಸಮರ್ಥ್ ಫೌಂಡೇಷನ್(ರಿ) ಕೌಶಲ್ಯಾಭಿವೃದ್ಧಿ ಮತ್ತು ತರಬೇತಿ ಕೇಂದ್ರದ ಸಹಯೋಗದಲ್ಲಿ ಮನೆಯಲ್ಲಿರುವ, ಉದ್ಯೋಗ ಮಾಡುವ ಉದ್ದೇಶ ಹೊಂದಿರುವ 17–45 ವರ್ಷದ ಎಲ್ಲಾ ವರ್ಗದ ಮಹಿಳೆಯರಿಗೆ ಉಚಿತವಾಗಿ 45 ದಿನಗಳ ಟೈಲರಿಂಗ್ ಮತ್ತು ಸೀರೆಗೆ ಕುಚ್ಚು ಹಾಕುವ ತರಬೇತಿ ನೀಡಲು ಅರ್ಜಿಯನ್ನು ಆಹ್ವಾನಿಸಿದೆ. ತರಬೇತಿಯ ಸಮಯವು ಬೆಳಿಗ್ಗೆ 10.00 ರಿಂದ ಸಂಜೆ 4.00 ಗಂಟೆಯವರೆಗೆ ಇರುತ್ತದೆ. ಅಭ್ಯರ್ಥಿಗಳಿಗೆ ಉಚಿತವಾಗಿ ತರಬೇತಿ ಕಿಟ್ ಮತ್ತು ಪಠ್ಯ ಪುಸ್ತಕವನ್ನು ನೀಡಲಾಗುವುದು.ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಸಮರ್ಥ್ ಫೌಂಡೇಷನ್ (ರಿ) ಸದ್ಗುರು ಭವನ, ಅರಳೇಪೇಟೆ ತುಮಕೂರು–572101. ದೂರವಾಣಿ ಸಂಖ್ಯೆ: 9986824210. 9148971939. 9449740593,

## ವಿಶ್ವ ಮಹಿಳಾ ದಿನಾಚರಣೆ: ವಿವಿಧ ಸ್ಪರ್ಧೆಗಳು

ತುಮಕೂರು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು 2025ನೇ ಸಾಲಿನ ವಿಶ್ವ ಮಹಿಳಾ ದಿನಾಚರಣೆಯನ್ನು 23/03/2025 ಭಾನುವಾರದಂದು ಕನ್ನಡ ಭವನದಲ್ಲಿ ಹಮ್ಮಿಕೊಂಡಿದ್ದು ಅದರ ಅಂಗವಾಗಿ 16/03/2025 ರಂದು ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಎಲ್ಲಾ ವಯೋಮಾನದ ಮಹಿಳೆಯರು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿದ್ದು. ಸ್ಪರ್ಧೆಗಳ ವಿವರ ಈ ಕೆಳಕಂಡಂತಿದೆ

1.ಪ್ರಭಂಧ ಸ್ಪರ್ಧೆ: ವಿಷಯ: "ಆಧುನಿಕ ಮಹಿಳೆಯರು ಎದುರಿಸುತ್ತಿರುವ ಸವಾಲುಗಳು" 2.ಹಾಡಿನ ಸ್ಪರ್ಧೆ: ಮಹಿಳೆಯರನ್ನು ಕುರಿತು ಜಾನಪದ ಗೀತೆಗಳು 3.ಚರ್ಚಾ ಸ್ಪರ್ಧೆ: "ಗ್ಯಾರಂಟಿ ಯೋಜನೆಗಳು ಮಹಿಳೆಯರ ಅಭಿವೃದ್ಧಿಗೆ ಪೂರಕವೇ/ಮಾರಕವೇ"

ಒಬ್ಬ ಸದಸ್ಯರು ಒಂದು ಸ್ಪರ್ಧೆಯಲ್ಲಿ ಮಾತ್ರ ಭಾಗವಹಿಸಲು ಅವಕಾಶ ನಿಮ್ಮ ಹೆಸರನ್ನು ಕನ್ನಡ ಭವನ ಅಮಾನಿಕರೆ ಮುಂಭಾಗ ತುಮಕೂರು ಇಲ್ಲಿ ಬಂದು ನೋಂದಾಯಿಸಲು ಹೆಸರು ನೋಂದಾಯಿಸಲು ಕೊನೆಯ ದಿನಾಂಕ: 15/03/2025 ಎಂದು ಅಧ್ಯಕ್ಷರ ಅಪ್ಪಣೆ ಮೇರೆಗೆ ಜಿಲ್ಲಾ ಮಹಿಳಾ ಘಟಕ ಪ್ರಕಟಣೆಯಲ್ಲಿ ತಿಳಿಸಿದೆ ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: ಗಂಗಮ್ಮ 7259249898. ಗೀತಾ ನಾಗೇಶ್ 9538135701

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಮತಿ ಭಾಗ್ಯರವರು ಇಂಡಿ ಬಿಜಾಪುರ ಅವರು ದೈವಾದೀನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಸದ್ಗತಿ ಯನ್ನು ಕರುಣಿಸಲಿ ಎಂದು ಆ ದೇವರಲ್ಲಿ ಪ್ರಾರ್ಥಿಸುವವರು

ದುಃಖತಪ್ತ ಕುಟುಂಬ ವರ್ಗದವರು, ಬಂಧು ಬಳಗದವರು ಮತ್ತು ಸ್ನೇಹಿತರು

# ಕುಂಚಿಟಿಗರನ್ನು ಕೇಂದ್ರ ಓಬಿಸಿ ಪಟ್ಟಿಗೆ ಸೇರಿಸುವ ಸಂಬಂಧ ಚರ್ಚಿಸಲು ಮನವಿ


ತುಮಕೂರು: ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಕುಂಚಿಟಿಗ ಒಕ್ಕಲಿಗರನ್ನು ಕೇಂದ್ರ ಓಬಿಸಿ ಪಟ್ಟಿಗೆ ಸೇರಿಸುವ ಸಂಬಂಧ,ಈಗಾಗಲೇ ಕರ್ನಾಟಕ ರಾಜ್ಯ ಸರಕಾರ ಕಳುಹಿಸಿರುವ ಶಿಫಾರಸ್ಸನ್ನು ಜಾರಿಗೆ ತರಲು ಕೇಂದ್ರ ಸರಕಾರದ ಜೊತೆ ಮಾತುಕತೆ ನಡೆಸಲು ಮಾಜಿ ಪ್ರಧಾನಿ ಹಾಗೂ ರಾಜ್ಯಸಭಾ ಸದಸ್ಯರಾದ ಹೆಚ್.ಡಿ.ದೇವೇಗೌಡ ಅವರೊಂದಿಗೆ ಕೌಶಲ್ಯಾಭಿವೃದ್ದಿ ಮಂಡಳಿ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಮುರುಳೀಧರ ಹಾಲಪ್ಪ ಚರ್ಚೆ ನಡೆಸಿದರು.



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಸೂಚನೆಯ ಮೇರೆಗೆ ಅವರನ್ನು ಕುಂಚಿಟಿಗ ಒಕ್ಕಲಿಗ ಸಮುದಾಯದ ಮುಖಂಡರೊಂದಿಗೆ ಭೇಟಿಯಾಗಿ ಸುಮಾರು ಅರ್ಧಗಂಟೆಗೂ ಹೆಚ್ಚು ಕಾಲ ಸಾಧಕ ಭಾಧಕಗಳ ಕುರಿತು ಚರ್ಚೆ ನಡೆಸಿದ ಮುರುಳೀಧರ ಹಾಲಪ್ಪ,ಮಾರ್ಚ್ 08 ರಂದು ಈಗಾಗಲೇ ಪ್ರಧಾನ ಮಂತ್ರಿಗಳ ಭೇಟಿಗೆ ಸಮಯ ನಿಗಧಿ ಪಡಿಸಿರುವ ಹಿನ್ನೆಲೆಯಲ್ಲಿ ದೆಹಲಿಗೆ ತೆರಳಿ, ಕುಂಚಿಟಿಗ ಒಕ್ಕಲಿಗ ಸಮುದಾಯವನ್ನು ಕೇಂದ್ರ ಓಬಿಸಿ ಜಾತಿ ಪಟ್ಟಿಗೆ ಸೇರಿಸುವಂತೆ ಮನವಿ ಮಾಡಲಾಗುವುದು ಎಂದರು.

ಕುಂಚಿಟಿಗ ಒಕ್ಕಲಿಗರನ್ನು ಹೊರತು ಪಡಿಸಿ, ಒಕ್ಕಲಿಗ ಸಮುದಾಯಕ್ಕೆ ಸೇರಿದ ಇತರೆ ಎಲ್ಲಾ ಉಪ ಪಂಗಡಗಳು ರಾಜ್ಯ ಮತ್ತು ಕೇಂದ್ರ ಸರಕಾರದ ಓಬಿಸಿ ಜಾತಿಪಟ್ಟಿಯಲ್ಲಿವೆ. ರಾಜ್ಯದ ಸುಮಾರು 17 ಜಿಲ್ಲೆಗಳ 37 ತಾಲೂಕುಗಳಲ್ಲಿ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಕುಂಚಿಟಿಗ ಸಮುದಾಯ ಮುಖ್ಯಕಸುಬು ವ್ಯವಸಾಯ ಮತ್ತು ಪಶುಸಂಗೋಪನೆ. ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ,ತುಮಕೂರು, ರಾಮನಗರ, ಮೈಸೂರು, ಹಾವೇರಿ, ಶಿವಮೊಗ್ಗ, ದಾವಣಗೆರೆ, ಹಾಸನ, ಚಿಕ್ಕಮಗಳೂರು, ಬಳ್ಳಾರಿ, ಕಾರವಾರ,ಚಿತ್ರದುರ್ಗ ಜಿಲ್ಲೆ ಹಾಗೂ ನೆರೆಯ ರಾಜ್ಯಗಳಾದ ಆಂಧ್ರ ಪ್ರದೇಶ, ತಮಿಳುನಾಡು ಕುಂಚಿಟಿಗ ಸಮುದಾಯದ ಜನರು ಇದ್ದಾರೆ.ಉಳಿದೆಲ್ಲಾ ರಾಜ್ಯಗಳಲ್ಲಿ ಕುಂಚಿಟಿಗ ಸಮುದಾಯ ಕೇಂದ್ರ ಒಬಿಸಿ ಪಟ್ಟಿಯಲ್ಲಿದ್ದರೆ, ಕರ್ನಾಟಕದ ಕುಂಚಿಟಿಗರನ್ನು ಮಾತ್ರ ಕೇಂದ್ರ ಓಬಿಸಿ ಪಟ್ಟಿಯಿಂದ ಕೈಬಿಡಲಾಗಿದೆ.ಈ ಅಸಮತೋಲನ ವನ್ನು ಸರಿಪಡಿಸುವ ನಿಟ್ಟಿನಲ್ಲಿ ಹಲವಾರು ಪ್ರಯತ್ನಗಳು ಜನಾಂಗದ ಮುಖಂಡರಿಂದಲೂ, ರಾಜ್ಯ ಸರಕಾರದಿಂದಲೂ ನಡೆದಿದೆ.ಕೇಂದ್ರ ಓಬಿಸಿ ಪಟ್ಟಿಯಲ್ಲಿ ಕುಂಚಿಟಿಗ ಸಮುದಾಯ ಸೇರ್ಪಡೆಗೊಂಡರೆ,ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ಜನಾಂಗಕ್ಕೆ ಹೆಚ್ಚಿನ ಅನುಕೂಲವಾಗಲಿದೆ.ಕೇಂದ್ರ ಸರಕಾರದ ಎಲ್ಲಾ ಹುದ್ದೆಗಳಲ್ಲಿ ಮೀಸಲಾತಿ ದೊರೆಯಲಿದೆ. ಮಾರ್ಚ್ 08ರ ಶನಿವಾರ ಕುಂಚಿಟಿಗ ಸಮುದಾಯದ ಮುಖಂಡರು ದೆಹಲಿಗೆ ಬರುವಂತೆ ಸಲಹೆ ನೀಡಿದ್ದಾರೆ. ಇದಕ್ಕಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೂ, ಕುಲಶಾಸ್ತ್ರಿಯ ಅಧ್ಯಯವನ್ನು ಪರಾಮರ್ಶಿಸಿ, ಕೇಂದ್ರಕ್ಕೆ ಶಿಫಾರಸ್ಸು ಮಾಡಿದ ರಾಜ್ಯ ಸರಕಾರಕ್ಕೂ ಕೃತಜ್ಞತೆ ಸಲ್ಲಿಸುವುದಾಗಿ ಮುರುಳೀಧರ ಹಾಲಪ್ಪ ತಿಳಿಸಿದ್ದಾರೆ.

# ಮಾ.12ರಿಂದ ಬೇಟೆರಾಯ ರಥೋತ್ಸವ



ತುರುವೇಕೆರೆ: ಪಟ್ಟಣದ ಬೇಟೆರಾಯ ದೇಗುಲದ ರಥೋತ್ಸವವು ಮಾರ್ಚ್ 12ರಂದು ನಡೆಯಲಿದೆ.

ರಥೋತ್ಸವದ ಅಂಗವಾಗಿ ಮಾರ್ಚ್ 5ರಿಂದ 18ರ ವರೆಗೆ ವಿವಿಧ ಉತ್ಸವ ಜರುಗಲಿದೆ. 5ರಂದು ಅಭಿಷೇಕ, ಗಣಪತಿ ಪೂಜೆ, ವಾಸುದೇವ ಪುಣ್ಯಾಹ, ಮೃತ್ತಿಕಾ ಸಂಗ್ರಹಣ ಪೂರ್ವಕ ಅಂಕುರಾರ್ಪಣ, ರಕ್ಷಾಬಂಧನ, ರಾತ್ರಿ ಹಂಸವಾಹನೋತ್ಸವ ಜರುಗಲಿದೆ.

6ರಂದು ಧ್ವಜಾರೋಹಣ, ಭೇರಿತಾಡನ ಹರಿವಾಣದ ಸೇವೆ, ಸಂಜೆ ಯಾಗಶಾಲಾ ಪ್ರವೇಶ, ರಾತ್ರಿ ಶೇಷವಾಹನೋತ್ಸವ, 7ಕ್ಕೆ ರಾತ್ರಿ ಚಿಕ್ಕಗರುಡೋತ್ಸವ, 8ಕ್ಕೆ ರಾತ್ರಿ ವೈರಮುಡಿ ಉತ್ಸವ, ಪುಷ್ಪಮಂಟಪೋತ್ಸವ, 9ರಂದು ದೊಡ್ಡ ಗರುಡೋತ್ಸವ, 10ರಂದು ರಾತ್ರಿ ಗಜೇಂದ್ರ ಮೋಕ್ಷ, ಗಜವಾಹನೋತ್ಸವ, 11ರಂದು ಗೋಪೂಜೆ, ಗೋಗ್ರಾಸ, ಅನ್ನ ಸಂತರ್ಪಣೆ, ರಾತ್ರಿ ಒಳಪ್ರಾಕಾರೋತ್ಸವ, ಅಶ್ವವಾಹನೋತ್ಸವ, ಸಂಬಂಧಮಾಲೆ, ಕಲ್ಯಾಣೋತ್ಸವ ನಡೆಯಲಿದೆ.

12 ರಂದು ರಥದ ಕಲಶಾರೋಹಣ, ರಥಪೂಜೆ, ಯಾತ್ರಾದಾನ ಪೂರ್ವಕ ಕೃಷ್ಣಗಂಧೋತ್ಸವ, ಮಂಟಪಡಿ ಸೇವೆ ಮತ್ತು ಪುಷ್ಪಾಲಂಕಾರ ಸೇವೆ ನಡೆಯಲಿದೆ. ಬೆಳಗ್ಗೆ 10.15 ರಿಂದ 12.30 ರೊಳಗೆ ರಥೋತ್ಸವ ನಡೆಯಲಿದೆ.

13 ರಂದು ರಾತ್ರಿ ಬಿಲ್ವಮಂಟಪ ಸೇವೆ, ಉಯ್ಯಾಲೆ ಸೇವೆ, ಕೈ ಅಡ್ಡೆ ಉತ್ಸವ, ಚಿತ್ರಚಾವಡಿ ಸೇವೆ, ಶಯನೋತ್ಸವ, ಲಕ್ಷ್ಮಿ ಪ್ರಣಯ ಕಲಹ, ಸಂಧಾನ ಲೀಲೋತ್ಸವ. 14 ರಂದು ಸುಪ್ರಭಾತ ಸೇವೆ, ಅವಭೃತ ಸ್ನಾನ, ಪೂರ್ಣಾಹುತಿ, ಪುಷ್ಪಯಾಗ, ರಕ್ಷಾಬಂಧ ವಿಸರ್ಜನೆ, ಧ್ವಜಾವರೋಣ, ರಾತ್ರಿ ಆಂಜನೇಯೋತ್ಸವ ನಡೆಯಲಿದೆ.

15 ರಂದು ರಾತ್ರಿ ಉಪ್ಪರಿಗೆ ವಾಹನೋತ್ಸವ, ವೈಕುಂಠೋತ್ಸವ, 16 ರಂದು ಕೀಲುಕುದುರೆ ಉತ್ಸವ, 17 ರಂದು ಚಂಪಕೋತ್ಸವ, 18 ರಂದು ಪಲ್ಲಕ್ಕಿ ಉತ್ಸವ ಮತ್ತು ವಿಜೋತ್ಸವ ನಡೆಯಲಿದೆ.

# ಈ ತಿಂಗಳು 15 ಕೆಜಿ ಅಕ್ಕಿ ವಿತರಣೆ : ತಹಸೀಲ್ದಾರ್ ಡಿಎನ್ ವರದರಾಜು

ಪಾವಗಡ ತಾಲೂಕಿನ ಬಿಪಿಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿದಾರರಿಗೆ ಫೆಬ್ರವರಿ ತಿಂಗಳ 5 ಕೆ ಜಿ ಮತ್ತು ಮಾರ್ಚ್ ತಿಂಗಳ 10 ಕೆ ಜಿ ಸೇರಿ ಕುಟುಂಬದ ಪ್ರತಿ ಸದಸ್ಯರಿಗೆ ಒಟ್ಟು 15 ಕೆ.ಜಿ ಅಕ್ಕಿ ವಿತರಿಸಲಾಗುವುದು ಎಂದು ಪಾವಗಡ ತಾಹಸೀಲ್ದಾರ್ ಡಿ ಎನ್ ವರದರಾಜು ಅವರು ತಿಳಿಸಿದ್ದಾರೆ

ತಮ್ಮ ಕಛೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈ ಹಿಂದೆ ಸರ್ಕಾರ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡ್ ಕುಟುಂಬದ ಪ್ರತಿ ಸದಸ್ಯರಿಗೆ 10 ಕೆಜಿ ಅಕ್ಕಿ ನೀಡಲಾಗುವುದು ಎಂದು ಘೋಷಿಸಲಾಗಿತ್ತು ಇಲ್ಲಿಯವರೆಗೂ 5 ಕೆಜಿ ಅಕ್ಕಿ, ಉಳಿದ ಐದು ಕೆಜಿಗೆ ಅಕ್ಕಿ ಬದಲಿಗೆ 170 ರೂಪಾಯಿ ಹಣವನ್ನು ಖಾತೆಗೆ ವರ್ಗಾಯಿಸಲಾಗುತ್ತಿತ್ತು, ಆದರೆ ಫೆಬ್ರವರಿ ತಿಂಗಳ ಪಡಿತರ ಈಗಾಗಲೇ ವಿತರಿಸಲಾಗಿದ್ದು ಆದೇಶದನ್ವಯ ಫೆಬ್ರವರಿ ತಿಂಗಳ 5 ಕೆಜಿ ಮತ್ತು ಮಾರ್ಚ್ ತಿಂಗಳ 10 ಕೆಜಿ ಅಕ್ಕಿಯನ್ನು ಸೇರಿಸಿ 15 ಕೆಜಿ ಅಕ್ಕಿ ವಿತರಿಸಲಾಗುವುದು ಗ್ರಾಹಕರು ತಮ್ಮ ಅನ್ಯಾಯ ಬೆಲೆ ಅಂಗಡಿ ಬಳಿ ತೆರಳಿ ಅಕ್ಕಿಯನ್ನು ಪಡೆಯಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ

# ಪವನ ವಿಜಯ ಸೇವಾ ಸಮಿತಿ 13ನೇ ವಾರ್ಷಿಕೋತ್ಸವ



ತುಮಕೂರು: ನಗರದ ಚಿಕ್ಕಪೇಟೆ ಶ್ರೀವ್ಯಾಸರಾಜರ ಮಠದಲ್ಲಿ ಶ್ರೀಪವನ ವಿಜಯ ಸೇವಾ ಸಮಿತಿ 13ನೇ ವಾರ್ಷಿಕೋತ್ಸವದ ಅಂಗವಾಗಿ ನಡೆಯುತ್ತಿರುವ ಶ್ರೀಮದ್ಭಾಗವತ ಮಹಾಪುರಾಣ ಮಹಾಯಾಗ ಹಾಗೂ ದಶಲಕ್ಷ ನವಗ್ರಹ ಸ್ತೋತ್ರ ಪಾರಾಯಣಗಳ ಸಮರ್ಪಣಾ ಮಹೋತ್ಸವಕ್ಕೆ ಆಗಮಿಸಿದ ಸೋಸಲೆ ವ್ಯಾಸರಾಜ ಮಠದ ಶ್ರೀವಿದ್ಯಾಶ್ರೀಶ ತೀರ್ಥರು, ಮುಳುಬಾಗಿಲು ಶ್ರೀಪಾದರಾಜ ಮಠದ ಶ್ರೀಸುಜಯನಿಧಿ ತೀರ್ಥರು ಶ್ರೀವಾದಿರಾಜ ಮಠದ ಶ್ರೀವಿಶ್ವವಲ್ಲಭ ತೀರ್ಥರು ಶನಿವಾರ ನಗರದ ಜಿಲ್ಲಾಧಿಕಾರಿ ಕಚೇರಿಬಳಿಯಿಂದ ಸ್ವಾಗತಿಸಲಾಯಿತು.

# 'ಸಿದ್ದರಾಮಯ್ಯನವರು ಒಳಮೀಸಲಾತಿ ಜಾರಿ ಮಾಡುತ್ತಾರೆಂಬ ವಿಶ್ವಾಸವಿದೆ': ಶ್ರೀ ಮಾದಾರ ಚೆನ್ನಯ್ಯ ಸ್ವಾಮಿಜಿ ವಿಶ್ವಾಸ



ಮಧುಗಿರಿ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಚುನಾವಣೆಗೂ ಮೊದಲು ಕೊಟ್ಟ ಭರವಸೆಯಂತೆ ಒಳಮೀಸಲಾತಿ ಜಾರಿ ಮಾಡುತ್ತಾರೆಂಬ ವಿಶ್ವಾಸವಿದೆ ಎಂದು ಚಿತ್ರದುರ್ಗದ ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಜೀ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲ್ಲೂಕಿನ ಕಸಬಾ ಹೋಬಳಿಯ ಜಡೇಗೊಂಡನಹಳ್ಳಿ ಬಳಿ ಇರುವ ನಿವೃತ್ತ ಅಪಾರ ಜಿಲ್ಲಾಧಿಕಾರಿ ಈರಪ್ಪನವರ ಮನೆಗೆ.. ಅವರ ಕುಟುಂಬ ವರ್ಗದವರನ್ನು ಭೇಟಿ ನೀಡಿ ಆಶೀರ್ವದಿಸಿ ಮಾತನಾಡಿದ ಅವರು

ಒಳಮೀಸಲಾತಿ ವಿಚಾರವಾಗಿ ಚರ್ಚೆ ನಡೆಸಿದ ಶ್ರೀಗಳು ಎಬಿಸಿಡಿ ವರ್ಗೀಕರಣ ಜಾರಿ ವಿಳಂಭವಾಗುತ್ತಿದ್ದು ಜಾತಿವಾರು ಅಂಕಿಅಂಶ ಪರಿಶಿಷ್ಟ ಜಾತಿಯಲ್ಲಿ ಯಾವ ಯಾವ ಜಾತಿಗಳು ಎಷ್ಟು ಪರ್ಸೆಂಟ್ ಇದಾವೆ ಎಂಬ ಅಂಕಿಅಂಶಗಳನ್ನು ನೀಡಿ ಸರ್ಕಾರವು ಒಳಮೀಸಲಾತಿ ತ್ವರಿತವಾಗಿ ಮುಗಿಸಿಕೊಡಬೇಕಿದೆ ಹೀಗಾದಾಗ ಮಾತ್ರ ಅರ್ಥಿಕ,ಶೈಕ್ಷಣಿಕ,ಸಾಮಾಜಿಕ ಹಾಗೂ ರಾಜಕೀಯವಾಗಿ ಹಿಂದೆ ಉಳಿದಿರುವ ನಮ್ಮ ಸಮುದಾಯಕ್ಕೆ ಹೊಸ ಚೈತನ್ಯ ಸಿಕ್ಕಂತಾಗುತ್ತದೆ ಅತಿ ಹೆಚ್ಚು ಜನಸಂಖ್ಯೆಯುಳ್ಳ ನಮ್ಮ ಜನಾಂಗವು ನಿರ್ಲಕ್ಷಕ್ಕೆ ಒಳಗಾಗಿದ್ದು ಒಳಮೀಸಲಾತಿ ನೀಡುವು ಮೂಲಕ ನಮ್ಮ ಜನಾಂಗಕ್ಕೆ ಸಾಮಾಜಿಕ ನ್ಯಾಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆದಷ್ಟೂ ಬೇಗನೆ ಈಡೇರಿಸುತ್ತಾರೆಂಬ ವಿಶ್ವಾಸವಿದೆ ಎಂದ ಶ್ರೀಗಳು,

ಸಮಾಜದ ಸೇವೆ ಮಾಡಿಕೊಂಡು ಬರುತ್ತಿರುವ ನಿವೃತ ಅಪಾರ ಜಿಲ್ಲಾಧಿಕಾರಿ ಈರಪ್ಪನವರ ಕುಟುಂಬದ ಸೇವೆ ಅನನ್ಯವಾದದ್ದು ಇವರ ಕುಟುಂಬವು ಮೊದಲಿನಿಂದಲೂ ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದು ಯಾವುದೇ ಪ್ರಚಾರ ಬಯಸದೇ ಸೇವೆ ಮಾಡುತ್ತಾ ಬಂದಿರುತ್ತಾರೆ ಈರಪ್ಪನವರ ಸುಪುತ್ರ ಜೆ.ಇ.ಶಶಿಧರ್ ಸಹ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ತಮ್ಮ ತಂದೆಯವರ ಹಾದಿಯಲ್ಲಿ ನಡೆಯುತ್ತಿರುವುದು ಸಂತಸದ ವಿಚಾರ ಇವರ ಬಳಿ ಯಾವ ಸಮುದಾಯದವರೇ ಬಂದರು ಸಹಾಯ ಹಸ್ತ ಚಾಚುವ ಗುಣ ರೂಡಿಸಿಕೊಂಡಿರುವ ಒಳ್ಳೆಯ ಮನಸ್ಸು ಇವರದ್ದಾಗಿದ್ದು ಅದೇ ರೀತಿ ಈರಪ್ಪನವರ ಸೊಸೆ ಶ್ರೀಮತಿ ರೂಪಕಲಾ ಶಶಿಧರ್ ರಾಜಕೀಯವಾಗಿ ಎರಡು ಬಾರಿ ಶಾಸಕರಾಗಿ ಉತ್ತಮ ಜನಸೇವೆ ಮಾಡುತ್ತಿದ್ದಾರೆ ಹಿರಿಯರು ಹೇಳಿದಂತೆ ದೇಹ ಭಾರವಾದಾಗ ಯೋಗ ಮಾಡು ಮನಸ್ಸು ಭಾರವಾದಾಗ ಧ್ಯಾನ ಮಾಡು ಸಂಪತ್ತು ಭಾರವಾದಾಗ ದಾನ ಮಾಡು ಎಂಬ ನಾಣ್ನುಡಿ ನೆನಪಿಗೆ ಬರುತ್ತದೆ ಸ್ವಾರ್ಥವಿಲ್ಲದ ಸೇವೆಯೇ ಮನುಷ್ಯನ ಜೀವನದ ಸಾರ್ಥಕತೆ ತಮ್ಮ ಸಮುದಾಯದ ಏಳ್ಗೆ ಬಗ್ಗೆ ಸದಾ ಚಿಂತಿಸುವ ಕುಟುಂಬ ಇವರದು ಇಂತಹ ವ್ಯಕ್ತಿಗಳು ನಮ್ಮ ಸಮುದಾಯಕ್ಕೆ ಒಂದು ಕಳಶಪ್ರಾಯವಿದ್ದಂತೆ ಎಂದರು.

ಇದೇ ವೇಳೆ ಶ್ರೀಗಳಿಗೆ ಈರಪ್ಪನವರ ಕುಟುಂಬದವರು ಸನ್ಮಾನಿಸಿ ಪೂಜೆಯಿಂದ ಪುರಸ್ಕರಿಸಿ ಶ್ರೀಗಳ ಆಶೀರ್ವಾದ ಪಡೆದರು. ಈ ಸಂಧರ್ಭದಲ್ಲಿ ಈರಪ್ಪನವರ ಸುಪುತ್ರ ವಿಧಾನಸಭಾ ಸಚಿವಾಲಯದ ನಿರ್ದೇಶಕರಾದ ಜೆ.ಇ.ಶಶಿಧರ್. , ಲತಾ ಚಂದ್ರಶೇಖರ್, ಪುಟ್ಟಲಕ್ಷ್ಮಮ್ಮ,ನರಸಿಂಹಯ್ಯ,ನಾಗರಾಜು, ಸುದ್ದೇಕುಂಟೆ ಮೂರ್ತಿ, ಈರಪ್ಪನವರ ಕುಟುಂಬದವರು ಹಾಗೂ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

# ಮದುವೆ ಮನೆಯಲ್ಲಿ ಮೊಳಗಿದ ಪುಸ್ತಕಾಭಿಮಾನ

## ಹರಸಿ ಹಾರೈಸಿದ ಬಂಧುಗಳಿಗೆ ನೆನಪಿನ ಕಾಣಿಕೆಯಾಗಿ ಪುಸ್ತಕ ವಿತರಿಸಿದ ವಧುವಿನ ತಂದೆ



ತುಮಕೂರು : ಸಾಮಾನ್ಯವಾಗಿ ಮದುವೆ ಮನೆ ಎಂದರೆ ವಧುವರರಿಗೆ ಹರಸಿ ಹಾರೈಸಲು ಬಂದ ಬಂಧುಗಳಿಗೆ ಉಟೋಪಾಚಾರದ ಜೊತೆ ತಾಂಬೂಲದೊಂದಿಗೆ ಉಡುಗೊರೆ ನೀಡುವುದು ಸಾಮನ್ಯ ಆದರೆ ಇಲ್ಲೊಬ್ಬ ಪುಸ್ತಕ ಪ್ರೇಮಿ ಗ್ರಂಥಪಾಲಕರೊಬ್ಬರು ತನ್ನ ಮಗಳ ಮದುವೆಗೆ ಬಂದ ಎಲ್ಲಾ ಬಂಧುಗಳಿಗೆ ಪುಸ್ತಕ ವಿತರಿಸುವ ಮೂಲಕ ಪುಸ್ತಕಭಿಮಾನವನ್ನ ವ್ಯಕ್ತಪಡಿಸಿ ಅಪರೂಪದ ಘಟನೆಗೆ ಸಾಕ್ಷಿಯಾಗಿದ್ದಾರೆ

ತಾಲೂಕಿನ ಹೆಬ್ಬೂರು ಹೋಬಳಿಯ ಸಿರಿವರ ಗ್ರಾಮದ ಶಿವಮೂರ್ತಿ ಎಂಬುವವರು ಆದೇ ಸಿರಿವರ ಗ್ರಾಮದ ಗ್ರಾಮ ಪಂಚಾಯ್ತಿಯ ಅರಿವು ಕೇಂದ್ರದಲ್ಲಿ ಗ್ರಂಥಪಾಲಕರಾಗಿ ಕಾರ್ಯ ನಿರ್ವಯಿಸುತ್ತಿದ್ದು ತನ್ನ ಮಗಳ ವಿವಾಹವು ಹೆಬ್ಬೂರಿನ ಗಾಯಿತ್ರಿ ಪ್ಯಾಲೆಸ್‌ನಲ್ಲಿ ನಡೆದಿದ್ದು ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಬಂಧುಗಳಿಗೂ ತಾವೇ ಸಂಪಾದಿಸಿದ "ಅರಿವಿನೆಡೆಗೆ ಕೆರೆದೊಯ್ಯುವ ವಿಶ್ವ ಜ್ಞಾನಿಗಳ ನುಡಿಮುತ್ತುಗಳು" ಎಂಬ ಪುಸ್ತಕವನ್ನ ನೆನಪಿನ ಕಾಣಿಕೆಯಾಗಿ ನೀಡಿದ್ದಾರೆ

ವಿವಾಹ ಕಾರ್ಯಕ್ರಮದಲ್ಲಿ ಗಣ್ಯಾಥಿಗಣ್ಯರು ಸೇರಿದಂತೆ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಜನರು ಭಾಗಿಯಾಗಿದ್ದು ಪ್ರತಿಯೊಬ್ಬರಿಗೂ ನೆನಪಿನ ಕಾಣಿಕೆಯಾಗಿ ಪುಸ್ತಕ ವಿತರಣೆಮಾಡಿದ್ದಾರೆ.

ಸಿದ್ದರಬೆಟ್ಟ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿಗಳು ಮಾತನಾಡಿ, ಜ್ಞಾನವು ವ್ಯಕ್ತಿಯ ಮನಸ್ಸನ್ನ ವಿಶಾಲಗೊಳಿಸುವುದರ ಜೊತೆಗೆ ದೊಡ್ಡ ಮನಸ್ಸಿನ ವ್ಯಕ್ತಿಯನ್ನಗಿ ನಿರ್ಮಾಣ ಮಾಡುತ್ತದೆ ಇಂತಹ ಪುಸ್ತಕವನ್ನ ಮದುವೆಗೆ ಬಂದ ಬಂಧುಗಳಿಗೆ ನೆನೆಪಿನ ಕಾಣಿಕೆಯಾಗಿ ನೀಡಿರುವ ಶಿವಮೂರ್ತಿಯವರು ಇತರರಿಗೆ ಮಾದರಿಯಾಗಲಿ ಇವರ ಈ ಪುಸ್ತಕಾಭಿಮಾನ ಓದುಗರಿಗೆ ಸ್ಪೂರ್ತಿಯಾಗಲಿ ಎಂದರು.

ಮಾಜಿ ಶಾಸಕ, ಹೆಚ್ ನಿಂಗಪ್ಪ ಮಾತನಾಡಿ ಇಂದಿನ ಯುವ ಜನತೆ ಮೋಬೈಲ್ ಗೀಳಿಗೆ ಬಲಿಯಾಗುತ್ತಿದ್ದು ಪುಸ್ತಕ ಓದುವಿನ ಮಹತ್ವವನ್ನು ಕಳೆದುಕೊಳ್ಳುತ್ತಿದ್ದಾರೆ ಇಂತಹ ಈ ಕಾಲಮಾನದಲ್ಲಿ ವಿಶ್ವ ಜ್ಞಾನಿಗಳ ನುಡಿಮುತ್ತುಗಳನ್ನ ತಾವೇ ಬರೆದು ಮುದ್ರಿಸಿ ತನ್ನ ಮಗಳ ವಿವಾಹ ಕಾರ್ಯಕ್ರಮಕ್ಕೆ ಬಂದ ಪ್ರತಿಯೋಬ್ಬರಿಗೂ ನೆನಪಿನ ಕಾಣಿಕೆಯಾಗಿ ನೀಡಿರುವುದು ಹೊಸದೊಂದು ಕ್ಷಣಕ್ಕೆ ಸಾಕ್ಷಿಯಾಗಿದೆ ಇದು ಅಪರೂಪದಲ್ಲಿ ಅಪರೂಪವಾದ ವಿವಾಹ ಕಾರ್ಯಕ್ರಮವಾಗಿದೆ ಇದು ಓದುಗರಿಗೆ ಸ್ಪೂರ್ತಿಯಾಗಲಿ ಎಂದರು.

ಇಂದಿನ ಕಾಲಮಾನದಲ್ಲಿ ವೈಭವಿಕರಣಕ್ಕೆ ಮಾರುಹೊಗುತ್ತಿರುವ ಜನತೆ ಈ ರೀತಿಯಾದ ವಿವಾಹ ಕಾರ್ಯಕ್ರಮದಲ್ಲಿ ತಮ್ಮ ಪ್ರತಿಷ್ಠೆಗೆ ಅದ್ದೂರಿ ಉಡುಗೊರೆಗಳನ್ನ ನೀಡುವುದು ಸಾಮಾನ್ಯ ಆದರೆ ಅವುಗಳ ಉಪಯೋಗ ಬೆಲೆಗೆ ಮೀಸಲು ಆದರೆ ಶಿವಮೂರ್ತಿಯವರು ವಿಶ್ವ ಜ್ಞಾನಿಗಳ ಆರ್ಥಪೂರ್ಣದ ನುಡಿಗಳನ್ನ ಪುಸ್ತಕದ ರೂಪದಲ್ಲಿ ಬಿತ್ತರಿಸಿ ಅಪರೂಪದ ಕ್ಷಣಕ್ಕೆ ಸಾಕ್ಷಿಯಾಗಿದ್ದಾರೆ ಇವರ ಈ ಕಾರ್ಯ ಓದುಗರಿಗೆ ಸ್ಪೂರ್ತಿಯಾಗಲಿ



–ಶ್ರೀ ಹನುಮಂತನಾಥ ಸ್ವಾಮೀಜಿ, ಶ್ರೀ ಕ್ರೇತ್ರ ಎಲೆರಾಂಪುರ.

# ಕೇಂದ್ರ ಸಂವಹನ ಇಲಾಖೆ ಛಾಯಾಚಿತ್ರ ಪ್ರದರ್ಶನಕ್ಕೆ ಪ್ರಥಮ ಬಹುಮಾನ



ತುಮಕೂರು: ತುಮಕೂರಿನ ಸಿದ್ಧಗಂಗಾ ಮಠದ ಆವರಣದಲ್ಲಿ ನಡೆದ ಕೃಷಿ ಹಾಗೂ ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ ಭಾರತ ಸರ್ಕಾರದ ಕೇಂದ್ರ ಸಂವಹನ ಇಲಾಖೆ, ಮೈಸೂರು ವತಿಯಿಂದ ಆಯೋಜಿಸಿದ್ದ ಕೇಂದ್ರ ಸರ್ಕಾರದ ಜನಪರ ಯೋಜನೆಗಳು ಹಾಗೂ ವಿಕಸಿತ ಬಜೆಟ್ @2047 ಛಾಯಾಚಿತ್ರ ಪ್ರದರ್ಶನಕ್ಕೆ ಪ್ರಥಮ ಬಹುಮಾನ ವಿಭಾಗದಲ್ಲಿ ಬಹುಮಾನ ದೊರೆತಿದೆ.

ಫೆಬ್ರವರಿ 17 ರಿಂದ ಮಾರ್ಚ್ 3ರವರೆಗೆ ನಡೆದ ಪ್ರದರ್ಶನದಲ್ಲಿ ವಿಕಸಿತ ಭಾರತ ಬಜೆಟ್ 2025–26, ಪಿಎಂ ಇಂಟರ್ನ್‌ಶಿಪ್ ಯೋಜನೆ, ಆಯು?ಮ್ಮಾನ್ ಭಾರತ್, ಪ್ರಧಾನ ಮಂತ್ರಿ ಜನ್ ಆರೋಗ್ಯ ಯೋಜನೆ, ಪ್ರಧಾನ ಮಂತ್ರಿ ಮುದ್ರಾ ಯೋಜನೆ, ವೆವ್ಸ್ 2025, ಪಿಎಂ ಸೂರ್ಯ ಘರ್, ವಿಕಸಿತ ಭಾರತಕ್ಕೆ ಪ್ರಧಾನ ಮಂತ್ರಿಯವರ ದೂರದೃಷ್ಟಿ 2047 ಹಾಗೂ ಇತರೆ ಯೋಜನೆಗಳ ಛಾಯಾಚಿತ್ರ ಪ್ರದರ್ಶನದ ಜೊತೆಗೆ ಯೋಜನೆಗಳ ಫಲಾನುಭವಿಗಳು ಹಂಚಿಕೊಂಡಿರುವ ಅನಿಸಿಕೆಗಳು ಮತ್ತು ಇತರೆ ಮಾಹಿತಿಯನ್ನು ವಿಡಿಯೋ ಮೂಲಕ ಬಿತ್ತರಿಸಲಾಯಿತು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಲವು ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು ವಸ್ತು ಪ್ರದರ್ಶನದ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು.

ಸಿದ್ದಗಂಗಾ ಮಠದ ಶ್ರೀಗಳಾದ ಸಿದ್ದಲಿಂಗ ಸ್ವಾಮೀಜಿ ಹಾಗೂ ವಿಧಾನ ಪರಿಷತ್ ಸದಸ್ಯರಾದ ಚಿದಾನಂದ ಗೌಡ ಬಹುಮಾನ ವಿತರಿಸಿದರು. ತುಮಕೂರಿನ ಪೊಲೀಸ್ ವರಿ?ಷ್ಠಾಧಿಕಾರಿ ಕೆ.ವಿ. ಅಶೋಕ್ ಇತರೆ ಗಣ್ಯರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಕೇಂದ್ರ ಸಂವಹನ ಇಲಾಖೆ ಕ್ಷೇತ್ರ ಪ್ರಚಾರ ಅಧಿಕಾರಿ ಶ್ರುತಿ ಎಸ್.ಟಿ., ಕ್ಷೇತ್ರ ಪ್ರಚಾರ ಸಹಾಯಕ ಸಿ.ಕೆ. ಸುರೇಶ್, ಸಿದ್ದಗಂಗಾ ಮಠದ ಕಾರ್ಯದರ್ಶಿ ಬಿ. ಗಂಗಾಧರಯ್ಯ, ಜಂಟಿ ಕಾರ್ಯದರ್ಶಿ ಎಸ್. ಶಿವಕುಮಾರ್, ಕೆ.ಬಿ. ರೇಣುಕಪ್ಪ ಹಾಜರಿದ್ದರು.

**ನೀರು ಅತ್ಯಮೂಲ್ಯ; ಮಿತವಾಗಿ ಬಳಸಿ ಭವಿಷ್ಯಕ್ಕಾಗಿ ಉಳಿಸಿ**

# ವಿ.ಎಸ್.ಎಸ್.ಎನ್.ಗೆ. ಡಿ .ಬಿ .ಲೋಕೇಶ್ ವಿರೋಧ ಆಯ್ಕೆ



ಪಾವಗಡ. ಪಾವಗಡ ತಾಲೂಕಿನ ಕೆ ಟಿ ಹಳ್ಳಿ ಗ್ರಾಮದ ವ್ಯವಸಾಯ ಸೇವಾ ಸಹಕಾರ ಸಂಘದ ಐದು ವರ್ಷದ ಅವಧಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ಒಟ್ಟು ನಾಲ್ಕು ಜನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿ ಡಿ .ಬಿ .ಲೋಕೇಶ್ ಪಾಳೆಗಾರ್ ಹೊರತುಪಡಿಸಿ ಉಳಿದ ಮೂರು ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆದಿದ್ದರಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ

ಇದೇ ಸಹಕಾರ ಸಂಘದ ಚುನಾವಣೆಯಲ್ಲಿ ಮಹಿಳಾ ಮೀಸಲು ಕ್ಷೇತ್ರದಿಂದ ಎಂ ನಾಗವೇಣಿ. ವರಲಕ್ಷ್ಮಿ ಡಿ ಹಾಗೂ ಹಿಂದುಳಿದ ವರ್ಗ .ಎ.ಮುದ್ದಯ್ಯ ಮತ್ತು ಹಿಂದುಳಿದ ವರ್ಗ ಬಿ ಕೆ.ಆರ್. ರಂಗಸ್ವಾಮಿ. ಸಾಲಗಾರರಲ್ಲದ ಕ್ಷೇತ್ರದಲ್ಲಿ ಆರ್. ಎಚ್. ನಾಗರಾಜ್ ಇವರುಗಳು ಆಯ್ಕೆಯಾಗಿರುತ್ತಾರೆ

ಒಟ್ಟು 12 ಸ್ಥಾನಗಳಿದ್ದು ಆರು ಸ್ಥಾನಗಳಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದು ಉಳಿಕೆ 6 ಸ್ಥಾನಗಳಿಗೆ ಫೆಬ್ರವರಿ 9 ನೇ ತಾರೀಕು ಚುನಾವಣೆ ನಡೆಯಲಿದೆ

# ಪೊಲೀಸರೊಂದಿಗೆ ನಾಗರೀಕರು ಸಹಕರಿ: ಪಿಎಸ್ಸೈ ವಿಜಯ್ ಕುಮಾರ್



ಮಧುಗಿರಿ: ನಾಗರೀಕರು ತಮ್ಮ ಮನೆಗಳನ್ನು ಬಿಟ್ಟು ಹೊರ ಹೋಗುವಾಗ ಕಡ್ಡಾಯವಾಗಿ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಬೇಕೆಂದು ಪಿ ಎಸ್ ಐ ವಿಜಯ್ ಕುಮಾರ್ ಸಾರ್ವಜನಿಕರಿಗೆ ಕರೆ ನೀಡಿದರು.

ಪಟ್ಟಣದ ಒಂದನೇ ಬ್ಲಾಕ್ ನಲ್ಲಿ ಮಧುಗಿರಿ ಪೊಲೀಸ್ ಠಾಣೆಯ ವತಿಯಿಂದ ಆಯೋಜಿಸಲಾಗಿದ್ದ ಜನ ಸಂಪರ್ಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ,

ಜನರು ಅನ್ಯ ಕಾರ್ಯದ ನಿಮಿತ್ತ ಅಥವಾ ಕೆಲವು ದಿನಗಳ ಕಾಲ ಮನೆ ಯಿಂದ ಹೊರ ಹೋಗುವಾಗ ಗಸ್ತು ಪೊಲೀಸರಿಗಾಗಲಿ , ಸ್ಥಳೀಯ ಠಾಣೆ ಗಾಗಲಿ ಮಾಹಿತಿ ನೀಡಿದರೆ ಪೊಲೀಸರು ಮನೆಯ ಬಗ್ಗೆ ಗಮನ ಹರಿಸುತ್ತಾರೆ ಹಾಗೂ ಮುಂದೆ ಆಗಬಹುದಾದ ಕಳ್ಳತನಗಳನ್ನು ತಡೆಯ ಬಹುದಾಗಿದೆ.


ವಾಹನ ಸವಾರರು ಕಡ್ಡಾಯವಾಗಿ ತಮ್ಮ ವಾಹನಗಳಿಗೆ ದಾಖಲಾತಿಗಳನ್ನು ಪೊಲೀಸರು ಕೇಳಿದಾಗ ತೋರಿಸ ಬೇಕು ದ್ವಿಚಕ್ರ ವಾಹನ ಸಾವಾರರು ಹೆಲ್ಮೆಟ್ ಧರಿಸಿ ವಾಹನ ಚಲಾಯಿಸ ಬೇಕು ಅಪ್ರಾಪ್ತರಿಗೆ ದ್ವಿ ಚಕ್ರ ವಾಹನಗಳನ್ನು ಸವಾರಿಗೆ ನೀಡಬಾರದು ನೀಡಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳ ಬೇಕಾಗುತ್ತದೆ.

ರಂಜಾನ್ ಹಾಗೂ ಮತ್ತಿತರರ ಹಬ್ಬ ಹರಿದಿನಗಳು ಸಮೀಪವಾಗುತ್ತಿದ್ದು ಎಲ್ಲಾರೂ ಸೌಹಾರ್ದ ಹಾಗೂ ಶಾಂತಿ ಯುತವಾಗಿ ಎಲ್ಲಾರೂ ಸೇರಿ ಆಚರಿಸ ಬೇಕು. ದೊಡ್ಡಪೇಟೆಯಲ್ಲಿ ವಿನಾ ಕಾರಣ ರಾತ್ರಿ ವೇಳೆಯಲ್ಲಿ ಅನಗತ್ಯವಾಗಿ ಕೆಲವರು ಓಡಾಟ ಮಾಡುತ್ತಿದ್ದಾರೆ. ಅಂತಹವರ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ. ಯಾರಾದರೂ ಅಪರಿಚಿತರು ಹಾಗೂ ಅನುಮಾಸ್ಪದ ವ್ಯಕ್ತಿಗಳು ಕಂಡು ಬಂದರೆ ಪೊಲೀಸರಿಗೆ ಮಾಹಿತಿ ಒದಗಿಸಿ ತುರ್ತು ಸಹಾಯಕ್ಕಾಗಿ 112 ಕರೆ ಮಾಡಬೇಕೆಂದರು.

ಮುಖಂಡ ಎಸ್ ಬಿ ಟಿ ರಾಮು ಮಾತನಾಡಿ ಪಟ್ಟಣದಲ್ಲಿ ಹಿಂದೂ ಮುಸ್ಲಿಂಅಣ್ಣ ತಮ್ಮಂದಿರಂತೆ ಮೊದಲಿನಿಂದಲೂ ಅನೂನ್ಯವಾಗಿದ್ದೇವೆ ಇದೂವರೆವಿಗೂ ಯಾವುದೇ ಅಹಿತರ ಘಟನೆ ನಡೆಯದಂತೆ ನಾವುಗಳ ಸಹ ಎಚ್ಚರವಹಿಸಿದ್ದೇವೆ. ಹಬ್ಬ ಹರಿದಿನಗಳನ್ನು ಒಟ್ಟಾಗಿ ಸೇರಿ ಆಚರಿಸಿದರೆ ಪ್ರೀತಿ ವಿಶ್ವಾಸ ಹೆಚ್ಚುತ್ತದೆ.ಪೊಲೀಸ್ ಇಲಾಖೆಯವರು ಈ ಜನಸಂಪರ್ಕ ಸಭೆಯನ್ನು ಆಯೋಜಿಸಿ ನಮ್ಮ ಸಮಸ್ಯೆ ಗಳನ್ನು ಆಲಿಸಿ ಪರಿಹಾರಗಳನ್ನು ಒದಗಿಸಿ ಕೊಟ್ಟಿರುವುದು ನಮಗೆ ಖುಷಿ ತಂದಿದೆ ಎಂದರು.

ಪುರಸಭಾ ಸದಸ್ಯ ಆಲೀಂ , ಜಾಮೀಯ ಮಸೀದಿ ಅಧ್ಯಕ್ಷ ಆಲೀಂ , ಮುಷ್ತಾಕ್ ಮೌಲಾನ , ಬಹೀರ್ ಅಹಮದ್ , ರಘುಯಾದವ್ , ಲಕ್ಷ್ಮೀ ನಾರಾಯಣ್ , ಬಾಬ ಫಕ್ರುದ್ದೀನ್ , ಬಿಲಾಲ್ , ಷಾಜು , ಪೊಲೀಸ್ ಸಿಬ್ಬಂದಿ ಜಾಫರ್ ಸಾಧಿಕ್ ಹಾಗೂ ಮುಖಂಡರು ಇದ್ದರು.

# ಲಿಂಕ್ ಕೆನಾಲ್ ಕಾಮಗಾರಿ ಪೂರ್ಣಗೊಳಿಸಲು ಆಗ್ರಹಿಸಿ ವಕೀಲರ ಪ್ರತಿಭಟನೆ



ಕುಣಿಗಲ್ : ಲಿಂಕ್ ಕೆನಲ್ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ವಕೀಲರು ಸರ್ಕಾರವನ್ನು ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಪಟ್ಟಣದ ಕೋರ್ಟ್ ಆವರಣದಲ್ಲಿ ಸೋಮವಾರ ಹಾಗು ಮಂಗಳಾವಾರ ಎರಡು ದಿನ ಕೋರ್ಟ್ ಕಲಾಪ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ತಾಲೋಕ್ ಕಚೇರಿಯವರೆಗೆ ಮೆರವಣಿಗೆಯಲ್ಲಿ ಆದ್ಯಕ್ಷ ಶಂಕರ್ ನೇತ್ರತ್ವದಲ್ಲಿ ಆಗಮಿಸಿ ತಹಶೀಲ್ದಾರ್ ರಶ್ಮಿಯವರಿಗೆ ಮನವಿಪತ್ರ ಸಲ್ಲಿಸಿ ಮಾತನಾಡುತ್ತಾ ಲಿಂಕ್ ಕೆನಲ್ ನಿಂದ ಕುಣಿಗಲ್ ತಾಲೋಕಿನ ಪಾಲಿನ ನೀರು ಅಡೆ ತಡೆ ಇಲ್ಲದೆ ಹರಿಯುತ್ತದೆ. ರೈತರ ಜಮೀನು, ಕುಡಿಯಲು ನೀರು ಸೇರಿದಂತೆ ಎಲ್ಲಾ ವರ್ಗದವರಿಗೂ ಒಳಿತಾಗುತ್ತದೆ ತಾಲೋಕ್ ಅಭಿವೃದ್ಧಿ ಯಾಗುತ್ತದೆ ಉಪ ಮುಖ್ಯಮಂತ್ರಿ ಡಿಕೆ ಶಿವಕು

ಮಾರ್, ಮಾಜಿ ಸಂಸದ ಡಿಕೆ ಸುರೇಶ್ ಶಾಸಕ ಡಾಕ್ಟರ್ ರಂಗನಾಥ್ ತಾಲೋಕಿನ ನೀರಿನ ಬವಣೆ ತಿಳಿದು ಸುಮಾರು ಒಂದು ಸಾವಿರ ರೂ ಕೋಟಿ ಅನುದಾನ ತಂದು ಕಾಮಗಾರಿ ಪ್ರಾರಂಭಕ್ಕೆ ಚಾಲನೆ ನೀಡಿದ್ದರೂ ಇದನ್ನು ತಿಳಿಯದೆ ಕೆಲವರು ಲಿಂಕ್ ಕೆನೆಲ್ ಕಾಮಗಾರಿ ಬೇಡ ಎನ್ನುತ್ತಿರುವುದು ಸರಿ ಅಲ್ಲ. ಸಚಿವರಾದ ಪರಮೇಶ್ವರ್,ಕೆಎನ್ ರಾಜಣ್ಣ ವಿರೋಧ ವ್ಯಕ್ತ ಪಡಿಸುತ್ತಿರುವುದು ಸರಿಯಲ್ಲ ಎಂದು ಸಹಕಾರ ಸಚಿವರಿಗೆ ಧಿಕ್ಕಾರ ಕೂಗುವ ಮೂಲಕ ತಮ್ಮ ಅಕ್ರೋಶ ವ್ಯಕ್ತಪಡಿಸಿದರು. ಲಿಂಕ್ ಕೆನಾಲ್ ಗೆ ಯಾವ ಜನಪ್ರತಿನಿಧಿಗಳು ಅಡ್ಡಿಪಡಿಸಬಾರದೆಂದು ಮನವಿ ಮಾಡಿದರು. ಈ ಪ್ರತಿಭಟನೆಯಲ್ಲಿ ವಕೀಲರರಾದ ಚಂದ್ರೆಗೌಡ, ಕೆಎನ್ ರಾಮಚಂದ್ರ,ದಯಾನಂದ್, ಸತ್ಯ ನಾರಾಯಣ ಓಡೆಯರ್, ಹುಚ್ಚೆಗೌಡ, ಜಯರಾಮ್, ನಿಸರ್ ಅಹಮದ್, ರವಿಚಂದ್ರ, ಪ್ರಕಾಶ್, ಹರ್ಷ, ಕಲ್ಪನಾ, ಸುಲ್ತಾನಾ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗು ಪುರಸಭಾ ಸದಸ್ಯರಾದ ಅರುಣ್ ಕುಮಾರ್, ಜಯಲಕ್ಷ್ಮಿ, ಆಸ್ಮಾಜಭಿ , ಹಾಗು ವಿವಿಧ ಸಂಘ ಸಂಸ್ಥೆಯ ಸದಸ್ಯರು ಪ್ರತಿಭಟನೆಗೆ ಭಾಗವಹಿಸಿ ಬೆಂಬಲ ವ್ಯಕ್ತ ಪಡಿಸಿದರು.

**Printed by:** H.S.PARAMESH, SRI LAKSHMINARASIMHA OFFSET PRINTERS, 7TH CROSS, SRIRAMA NAGARA, TUMAKURU, TUMAKURU DIST., KARNATAKA PIN-572101
**Published by** RADHIKA A.R., D/O RAMAKRISHNAIAH, BEHAIND AC OFFICE, SWEET WATER BOREWELL ROAD, MADHUGIRI, MADHUGIRI TALUK, TUMAKURU DIST. KARNATAKA PIN-572132 **owned by** RADHIKA A.R., D/O RAMAKRISHNAIAH, BEHAIND AC OFFICE, SWEET WATER BOREWELL ROAD, MADHUGIRI, MADHUGIRI TALUK, TUMAKURU DIST. KARNATAKA PIN-572132 **Printed at** SRI LAKSHMINARASIMHA OFFSET PRINTERS, 7TH CROSS, SRIRAMA NAGARA, TUMAKURU, TUMAKURU DIST., KARNATAKA PIN-572101 **and published at** TUMAKURU. BEHAIND AC OFFICE, SWEET WATER BOREWELL ROAD, MADHUGIRI, MADHUGIRI TALUK, TUMAKURU DIST. KARNATAKA PIN-572132
**Editor:** RADHIKA A.R. "**KARNATAKA SUCCESS NO 1**" KANNADA Daily News Paper